# ಡಿ.ಆರ್.ನಾಗರಾಜ ಅವರ ಜನಪದ ಕಾವ್ಯಾಧ್ಯಯನದ ನೆಲೆಗಳು

– ಭೀಮೇಶ

ವಿಳಾಸ: ಭೀಮೇಶ, ಸಂಶೋಧನಾ ವಿದ್ಯಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಕರ್ನಾಟಕ, ಭಾರತ
583276 bhimeshyaradoni@gmail.com 9620454824

ಜಾಗತಿಕ ಮಟ್ಟದ ವಿದ್ವಾಂಸರಾದ ಡಿ.ಆರ್.ನಾಗರಾಜ ಅವರು ಮೊದಲನೇಯದಾಗಿ ಮಂಟೇಸ್ವಾಮಿ ಕಾವ್ಯವನ್ನು ಬುಡಕಟ್ಟು ಸಾಹಿತ್ಯ ಮತ್ತು ಬುಡಕಟ್ಟು ಸಂಸ್ಕೃತಿಯ ಯೋಜನೆ ಎಂದು ಕರೆಯುವುದನ್ನು ಅನುಮಾನಿಸುತ್ತ ವಿಶ್ವಸ್ಥವಾದ ಈ ರೀತಿಯ ಶೈಕ್ಷಣಿಕ ವಿಧಾನಗಳ ಮೇಲೆ 'ಮಿಲ್ಮನ್ ಪ್ಯಾರಿ (Making of Homoric Verse) ಮತ್ತು ಅಲ್ಬರ್ಟ ಲಾರ್ಡ್'ನ ಪ್ರಭಾವವಿರುವುದನ್ನು ತಿಳಿಸುವರು. ಈ ಅಧ್ಯಯನ ವಿಧಾನವನ್ನು ಮುರಿದು ಹಾಕಿದವರು ಯುಗೋಸ್ಲೋವಿಯಾದ ರೈತರಾದ 'ಕಾರ್ಲ ಹುಸೇನಿ ಮತ್ತು ಆಗ್ರೋ ಮೆವ್‌ದಿಕ್' ಇವರು, ಇಬ್ಬರು ಜನಪದ ಮುಸ್ಲಿಂ ಗಾಯಕರನ್ನು ಅಧ್ಯಯನ ಮಾಡುವ ಮೂಲಕ ಯೂರೋಪಿನ ಕ್ಲಾಸಿಕಲ್ ಮಹಾಕಾವ್ಯದ ಚರ್ಚೆಯನ್ನು ಪರಿವರ್ತಿಸಿದರು. ಯೂರೋಪಿನ ಕ್ಲಾಸಿಕಲ್ ಪ್ರಭಾವವು ಕನ್ನಡದ ನವೋದಯ ಕಾವ್ಯದ ಮೇಲಾಗಿರುವುದರಿಂದ ಅದರ ಅಧ್ಯಯನಗಳು ಮೌಖಿಕ ಮತ್ತು ಶಿಷ್ಟವನ್ನು ತದ್ವಿರುದ್ಧ ದಿಕ್ಕಿನಲ್ಲಿಯೇ ನೋಡಿವೆ. ಆದರೆ ಜನಪದ ಕಾವ್ಯಗಳು ಕೇವಲ ಮುಗ್ಧ ಮತ್ತು ರೊಮ್ಯಾಂಟಿಕ್ ಮಾತ್ರವಲ್ಲ, ಅವು ನ್ಯೂಟನ್‌ನ ಮಹಾಕಾವ್ಯದೊಂದಿಗೆ ಹೋಲಿಸಬಹುದಾದ ಸಮೃದ್ಧಿಯನ್ನು, ವೈಚಾರಿಕ ಪರಂಪರೆಯನ್ನು ಹೊಂದಿವೆ. ಆದ್ದರಿಂದ ಈ ಜನಪದ ಮಹಾಕಾವ್ಯಗಳ ಮೂಲಕ ಕನ್ನಡ ಸಾಹಿತ್ಯ ಪರಂಪರೆಯನ್ನು ಪುನರ್ ನಿರ್ಮಿಸುವ, ಭಾರತೀಯ ಸಾಹಿತ್ಯಗಳ ಬಗೆಗಿನ ಒಂದು ಹೊಸ ಚರ್ಚೆಯನ್ನು ಉಂಟು ಮಾಡುವ ಸಾಧ್ಯತೆಯನ್ನು ಡಿ.ಆರ್.ಅವರು ಆಲೋಚಿಸುತ್ತಿದ್ದಾರೆ. "ಕನ್ನಡ ಮಹಾಕಾವ್ಯಗಳ ಸಾಲಿಗೆ ಸೇರಬಹುದಾದ ಕೃತಿಯಿದೆ. ಆದರೆ ಏಕೆ ಸೇರಕಾಗ್ತಾಯಿಲ್ಲ ಅಂತೆಂದರೆ. ಈ ಒಂದು ಕಾವ್ಯದ ಹಿಂದೆ ಆತ್ಮ ಪ್ರತ್ಯಯ ಇರುವ ಅಥವಾ ಆತ್ಮ ಪ್ರಜ್ಞೆ ಇರುವ ಒಂದು Self Conscios Litrerary Culture ಅನ್ನೊಂದು ಕೆಲಸ ಮಾಡ್ತಾಯಿಲ್ಲ". (ಮೊಗಳ್ಳಿ ಗಣೇಶ, ದೇಶಿ ಕಥನ, ಪುಟ 42) ಎಂಬ ಕೊರತೆಯನ್ನು ಗುರುತಿಸುತ್ತಿದ್ದಾರೆ. ನಮ್ಮ ಅಧ್ಯಯನಕಾರರು ಮಾಡಿಕೊಂಡು ಬಂದಿರುವ ಶಿಷ್ಟ ಮತ್ತು ಮೌಖಿಕದ ಸರಳ ವಿಭಜನೆಯನ್ನು "ಒಂದು ಘಟ್ಟದ ಆಚೆಗೆ ಫೋಕ್ ಮತ್ತು ಕ್ಲಾಸಿಕಲ್, ಟ್ರೈಬ್ ಆಂಡ್ ಕಾಸ್ಟ್ ಇವೆರಡು ಬೆರೆತು ಹೋಗುವ ಒಂದು ವಿರಾಟ ಸಂಕರದ ವಿದ್ಯಾಮಾನವನ್ನು ನಾವು ಭಾರತೀಯ ಸಂಸ್ಕೃತಿಯ ಒಳಗಡೆ ಕಾಣುತ್ತೇವೆ".[1] ಯಾಕೆಂದರೆ ಇದು ಬುಡಕಟ್ಟು ಕಾವ್ಯ, ಇದು ಶಿಷ್ಟ ಸಮಾಜದ ಕೇಂದ್ರದ ಹೊರಗಡೆ ಇರುವ ಕಾವ್ಯ ಎಂದು ಕಾವ್ಯವನ್ನು ಓದುತ್ತಿರುವಾಗ ಈ ರೀತಿಯ ನಂಬಿಕೆಗಳನ್ನು ವಿಸರ್ಜಿಸುವ ಒಂದು ಬೌದ್ಧಿಕ ವಾತಾವರಣವನ್ನು ಕಾವ್ಯದ ಒಳಗಿನ ಆಶಯ ಮತ್ತು ಒತ್ತಡದಲ್ಲಿಯೇ ಕಾಣುತ್ತೇವೆ. ಅಲ್ಲದೇ ಮಂಟೇಸ್ವಾಮಿ ತನ್ನನ್ನು ಅಲ್ಲಮ ಪ್ರಭುವಿನ ಜೊತೆಗೆ ಆಹ್ವಾನಿಸುತ್ತಾನೆ. ಅಲ್ಲಮಪ್ರಭು ಬಂದ ತಕ್ಷಣ ಅವರ ಹಿಂದೆ ಒಂದು ಮಹಾ ದಾರ್ಶನಿಕರ ಪರಂಪರೆಯೇ ಆರಂಭವಾಗುತ್ತದೆ. ಅಲ್ಲಮಪ್ರಭುನೊಡನೆ ಅಲ್ಲಿ ಗೋರಖನಾಥ ಬರುತ್ತಾನೆ. ಹಾಗೆಯೇ ಅಭಿನವಗುಪ್ತನು ಬರುತ್ತಾನೆ. ಹೀಗೆ ಅನೇಕರು ಅಲ್ಲಮನೊಡನೆ ಹಾಜರಾಗುತ್ತಾರೆ.

"ಮಂಟೇಸ್ವಾಮಿ ಕಾವ್ಯವನ್ನು ನೀವು ಅಧ್ಯಯನ ಮಾಡುವಾಗ ನೀವು ಒಂದು ಸೀಮಿತವಾದ ಕನ್ನಡದ ಸ್ವಯಂಪೂರ್ಣ ಜಗತ್ತಿನೊಳಗಡೆಗೆ ಮಾಡೋಕಾಗಲ್ಲ. ಜಾನಪದ ಅಧ್ಯಯನಗಳ ಬಹಳ ಮುಖ್ಯವಾದ ಮಿತಿ ಏನಂತೆಂದರೆ, ತಾವು ಶೋಧಿಸುತ್ತಾ ಇರುವ ವಸ್ತುಗಳು ಸೀಮಿತ ಸ್ವಯಂಪೂರ್ಣ ಲೋಕದಲ್ಲಿ ಹುಟ್ಟಿರುತ್ತದೆ ಅಂತ ತಿಳಿದುಕೊಂಡಿರುತ್ತೇವೆ. ಆದ್ರೆ ಅದು ಹಾಗಲ್ಲ, ಅಲ್ಲಿಂದ್ಲೇನೇ ಜಾನಪದ ಅನ್ನೊದು ತನ್ನ ಜಾನಪದೀಯತೆಯನ್ನು ತನ್ನ ಸ್ಥಳೀಯತೆಯನ್ನು ಮುರ್ಕೊಂಡು ಹೊರಬರುವ ಅನೇಕ ಮಹತ್ವಾಕಾಂಕ್ಷಿ ಪ್ರತಿಭೆಗಳಲ್ಲಿ ಇದು ಕೂಡ ಒಂದು. ಶೈವ ಸಂಸ್ಕೃತಿ ನಿರ್ಮಾಣ ಅನ್ನುವುದನ್ನು ಒಂದು ಅಖಿಲ ಭಾರತೀಯ ವ್ಯಾಪ್ತಿಯ ವಿರಾಟ ನಾಟಕ ಅಂತಹ ವಿಮರ್ಶಿಸುವುದಾದರೆ ಈ ವಿರಾಟ ನಾಟಕದೊಳಗಡೆಗೆ ಕೆಲವು ತತ್ವಗಳು, ವ್ಯಕ್ತಿಗಳ ರೂಪದಲ್ಲಿ ಬರುತ್ತವೆ ಅಂತ ಹೇಳುವುದಾರೆ ಕೆಲವು ವೈಚಾರಿಕ ಆಕೃತಿಗಳು ಪಾತ್ರಗಳಾಗಿ ಬರುತ್ತವೆ. ಅಂತ ಹೇಳುವುದಾದರೆ, ಮಂಟೆಸ್ವಾಮಿ ಆ ರೀತಿಯ ಒಂದು ಪಾತ್ರ ಅದಕ್ಕೇನೆ ಇಲ್ಲಿ ಉದ್ದಕ್ಕೂನು ಪ್ರಭುವಿನ ಪ್ರಸ್ತಾಪ ನೇರವಾಗಿ ಇದೆ."[2] ಇಲ್ಲಿ ಮಂಟೇಸ್ವಾಮಿ ಕಾವ್ಯವನ್ನು ಭಾರತದ ಶೈವ ಪರಂಪರೆಯೊಂದಿಗೆ ಇಟ್ಟು ಅದಕ್ಕೊಂದು ಭಾರತೀಯ ಮಟ್ಟದ ಮಾನ್ಯತೆಯನ್ನು ತಂದುಕೊಡುವ ಆಶಯ ವ್ಯಕ್ತವಾಗಿದೆ.

ಕಾವ್ಯದಲ್ಲಿ ಮಂಟೇಸ್ವಾಮಿಯು ಜಾತಿಸೂಚಕ, ಅವಮಾನದ ಸಂಕೇತಗಳನ್ನು ಮುಂದೆ ಆತ್ಮ ಗೌರವದ ಸಂಕೇತಗಳನ್ನಾಗಿ ಮಾರ್ಪಡಿಸುತ್ತಾನೆ. ಕಥನದಲ್ಲಿ ಅಂತರ್ಗತವಾಗಿರುವ ಇಂತಹ ಸಂಗತಿಗಳನ್ನು ನಿರ್ನಾಮ ಮಾಡೋಕಾಗಲ್ಲ ಎಂದು ಡಿ.ಆರ್.ಹೇಳಲು ಕಾರಣ ಅವರಿಗಿರುವ ದಲಿತ ಬಂಡಾಯ ಚಳುವಳಿಯ ನಂಟು ಮತ್ತು ತಳ ಸಮುದಾಯಗಳ ಬಗೆಗಿನ ಮಾನವೀಯ ಕಾಳಜಿಗಳು ಕಾರಣವಾಗಿವೆ. ಇಂತಹ ಕಾವ್ಯಗಳನ್ನು ಸೃಷ್ಟಿ ಮಾಡಿರುವ ಕಲಾವಿದರ ಬಗೆಗೆ ಮಾನವ ಕುತೂಹಲದ ಮಾಹಿತಿ ಆಧಾರಿತವಾದ ದೃಷ್ಟಿಕೋನಕ್ಕಿಂತ ಸೈದ್ಧಾಂತಿಕ ಮಟ್ಟದಲ್ಲಿ ಚರ್ಚೆಗಳಾಗಬೇಕೆಂದು ಒತ್ತಾಯಿಸುತ್ತಾರೆ. ಆ ಮೂಲಕ ಕಥನಕಾರರು ಸೈದ್ಧಾಂತಿಕ ವಿಚಾರ ವೈಚಾರಿಕ ಹಿನ್ನೆಲೆ ಮೊದಲಾದವುಗಳು ಕಾವ್ಯ ಕಟ್ಟುವಲ್ಲಿ ಬೀರಿರಬಹುದಾದ ಪರಿಣಾಮಗಳನ್ನು ಅಧ್ಯಯನಕ್ಕೊಳಪಡಿಸಬಹುದು.

ಮಂಟೇಸ್ವಾಮಿ ಕಾವ್ಯದಲ್ಲಿ "ವಿವಿಧ ದಾರೆಗಳು ಈ ಗೃಹಸ್ಥ ದಾರೆಗಳ ಜೊತೆಗೆ ಹೊಡದಾಡಿ ಅಲ್ಲಿಂದ ಶಿಷ್ಯರುಗಳನ್ನು ಪಡೆದು ತಮ್ಮ ಪರಂಪರೆಯ ಮುಂದುವರಿಕೆಯನ್ನು ಪಡೆದುಕೊಳ್ಳುವ ರೂಢಿಯನ್ನು, ಇಲ್ಲಿರುವ ಪ್ರತಿಯೊಂದು ಮುಖ್ಯ ಘರ್ಷಣೆಗಳು ಹೇಳುತ್ತವೆ".[3] ಪರಂಪರೆಯ ಮುಂದುವರಿಕೆ ಕಾರ್ಯವು ಕಾವ್ಯದ ಮುಖ್ಯ ವಸ್ತುಗಳಲ್ಲೊಂದಾಗಿದೆ. ಅಖಿಲ ಭಾರತ ಮಟ್ಟದ ಅದ್ವೈತದಲ್ಲಿ ಶೂದ್ರ ಅದ್ವೈತವಾದ ಬೇರೆ. ಅದರಲ್ಲಿ ಭೀಮಾಬೋಯಿ (ನಿರ್ವೇದ ಸಾಧನ), ಅಲ್ಲಮಪ್ರಭು, ನಾರಾಯಣಗುರು, ಮಂಟೇಸ್ವಾಮಿ, ನವನಾಥ ಸಿದ್ಧರ ಶೈವ ತಂತ್ರಗಳನ್ನು ಡಿ.ಆರ್.ರವರು ಹೇಳುತ್ತಾರೆ. ಅಖಿಲ ಭಾರತ ಮಟ್ಟದಲ್ಲಿ ದೊಡ್ಡ ಶೈವ ಸಂಸ್ಕೃತಿಯ ಅಭಿವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳಲು ಮತ್ತು ತಮ್ಮ ಸಾಹಿತ್ಯದ ಪರಿಕಲ್ಪನೆಗಳನ್ನು ಪುನರ್ ಪರಿಚಯ ಮಾಡಿಕೊಳ್ಳಲು ಮಂಟೇಸ್ವಾಮಿ ಒಬ್ಬ ಅತ್ಯಂತ ದೊಡ್ಡ ದಲಿತ ಅದ್ವೈತಿ ಎಂದು ಕನ್ನಡ ನೆಲದ ದೇಶಿ ಕಾವ್ಯವನ್ನು ಜಗದ್ಭಾರತದ ಮಟ್ಟದಲ್ಲಿ ಡಿ.ಆರ್.ರವರು ವಿವೇಚಿಸಿದ್ದಾರೆ. ಹೀಗೆ ಅನೇಕರು ಸಾಹಿತ್ಯ ವಿಮರ್ಶೆಯ ಜಾಡು ಬಿಟ್ಟು ಅವೈದಿಕ ಆಧ್ಯಾತ್ಮ ಧಾರೆಗಳತ್ತ ಹೊರಳಿದ್ದಾರೆ. ಅಷ್ಟರ ಮಟ್ಟಿಗೆ ಜನಪದ ಕಾವ್ಯಾಧ್ಯಯನಗಳ ಪ್ರಭಾವವಿದೆ.

ಡಿ.ಆರ್.ನಾಗರಾಜರವರು 'ವಿಸರ್ಜಿತ ಲೋಕಗಳಿಂದ ಹುಟ್ಟಿ ಬಂದ ಆಧ್ಯಾತ್ಮಿಕ ದಂಗೆ ಕೊರ'ನ ಲೇಖನವನ್ನು ಕಥನ ಕಸಿಯ ಮಾದರಿಯಲ್ಲಿ (ಅಂದರೆ ಮಂಟೇಸ್ವಾಮಿ ಜೀವನದ ಘಟನೆಗಳ ಮೇಲೆ ಅಲ್ಲಮನ ವ್ಯಕ್ತಿತ್ವವನ್ನು ಇಟ್ಟು ಕಸಿ ಮಾಡುತ್ತಾ ಹೋಗುವುದು) ಹೇಳಿದ್ದಾರೆ. "ಮಂಟೇಸ್ವಾಮಿ ಕಾವ್ಯ ತನ್ನ ಆಂತರಿಕ ಆಶಯ ಮತ್ತು ಕಥನ ಕ್ರಮಗಳಿಂದ ಶೂನ್ಯಸಂಪಾದನೆಯ ಜೊತೆಗೆ ಇಟ್ಟು ನೋಡುವಂತೆ ಒತ್ತಾಯಿಸುತ್ತದೆ. ಅದರಲ್ಲೂ ಕಲ್ಯಾಣ ಪಟ್ಟಣದ ಸಾಲು ಎಂಬ ಕಥಾ ಭಾಗವಂತೂ ಶೂನ್ಯ ಸಂಪಾದನೆಯ ಜಾನಪದೀಯ ಪುನರ್‌ರಚನೆ ಎಂದೇ ಹೇಳಬೇಕು. ಶೂನ್ಯ ಸಂಪಾದನೆ ಯಾವುದನ್ನು ವಿಸರ್ಜಿಸಿತ್ತೋ, ಆ ವಿಸರ್ಜಿತ ಲೋಕಗಳಿಂದ ಮೂಡಿ ಬಂದ ದಂಗೆ ಕೊರ"[4] ಮಂಟೇಸ್ವಾಮಿ ಶೈವ ಕಥನವನ್ನು ಹೇಳಿದ್ದಾರೆ.

ಕಾವ್ಯದ ಆಂತರಿಕ ಆಶಯ ಮತ್ತು ಕಥನಾಕ್ರಮಗಳನ್ನು ಶೂನ್ಯ ಸಂಪಾದನೆಯೊಂದಿಗಿನ ತೌಲನಿಕ ಅಧ್ಯಯನವನ್ನು ಮಾಡಿದ್ದಾರೆ. ಇಲ್ಲಿ ಶೂನ್ಯಸಂಪಾದನೆ ಯಾವುದನ್ನು, ಏಕೆ ವಿಸರ್ಜಿಸಿತು ಎಂಬ ಪ್ರಶ್ನೆಯೊಂದು ಮೂಡುತ್ತದೆ. ಶೂನ್ಯಸಂಪಾದನೆಯು ಸಾಂಸ್ಥಿಕ ಅಗತ್ಯತೆಗಳಲ್ಲಿ ರಚನೆಗೊಂಡಿತು. ಅದು ಜನಾಂಗವೊಂದು ಸಮಗ್ರ ಏಕೀಕೃತತೆ ಸಾಧಿಸುವ ಘಟ್ಟದಲ್ಲಿ, ಭಕ್ತಿ ಸಮುದಾಯಕ್ಕೆ ದೃಢೀಕೃತ ಪವಿತ್ರ ಪಠ್ಯದ ಅಗತ್ಯತೆ ಹೆಚ್ಚಾದಂತೆ ಸ್ಥಿರೀಕರಣಗೊಂಡಿತು. ಆಗ ವಚನ ಚಳುವಳಿಯ ಜೊತೆಗೆಯಿದ್ದು ತಾತ್ವಿಕ ಭಿನ್ನತೆ ಹೊಂದಿದ್ದ ಅಲ್ಲಮನಿಗಿಂತ ಬಸವಣ್ಣನ ಮಹಾಮನೆ, ಕಲ್ಯಾಣಗಳನ್ನು ಪವಿತ್ರೀಕರಿಸಲಾಯಿತು. ಆದರೆ ಸಂದೇಹವಾದಿ ಮಂಟೇಸ್ವಾಮಿಯು ಕಲ್ಯಾಣದ ಪರಂಪರೆಯೊಂದಿಗೆ ಮರುಬಂಡಾಯವನ್ನು ಹೂಡುತ್ತಾನೆ. ಇದನ್ನು ಡಿ.ಆರ್.ರವರು ಕಲ್ಯಾಣದ ಪರೀಕ್ಷಾಯಾತ್ರೆಯಾಗಿ, ಬಸವಣ್ಣ ಮತ್ತು ಮಂಟೇಸ್ವಾಮಿಯವರಿಗೆ ಆತ್ಮಪರೀಕ್ಷಾಯಾತ್ರೆಯಾಗಿಯೂ ಕಂಡಿದ್ದಾರೆ. ಇಲ್ಲಿ ಜಾನಪದ ಅನುಭಾವಿಯ ಕಾವ್ಯವು ಸಾಮಾಜಿಕ ವಿಷಮತೆಯ ಒಡಲಿಂದ ಆಧ್ಯಾತ್ಮಿಕತೆಯನ್ನು ಸೃಷ್ಟಿಸಲು ಹವಣಿಸುತ್ತಿದೆ. ಶೂನ್ಯಸಂಪಾದನೆಯಲ್ಲಿ ಅಲ್ಲಮ ಅಖಂಡವಾಗಿ ಶೂನ್ಯಸಿಂಹಾಸನವನ್ನು ಏರಿದರೆ, ಜಾನಪದ ಕಾವ್ಯದಲ್ಲಿ ಬಸವಣ್ಣ ಮತ್ತು ನೀಲಮ್ಮನವರೇ ವಿಸರ್ಜಿತ ಲೋಕವಾದ ಹರಳಯ್ಯನ ತಿಪ್ಪೆಯಿಂದ ತಂದ ರುಂಡ–ಮುಂಡಗಳನ್ನು ಬೇರೆ ಬೇರೆಯಾಗಿಯೇ ಉರಿಗದ್ದಿಗೆಯ ಮೇಲಿಡುತ್ತಾರೆ. ಶೂನ್ಯಸಂಪಾದನೆಕ್ಕಿಂತ ಉರಿಗದ್ದಿಯ ಘಟನೆ ಅಸಂಗತತೆಯಿಂದ ಕೂಡಿದೆ.

ಕಾವ್ಯದ ಹಲವಾರು ಅಂಶಗಳನ್ನು ಡಿ.ಆರ್.ರವರು ಪ್ರತಿಮೆ ಆಶಯಗಳ ಮೂಲಕ ಕಂಡಿದ್ದಾರೆ. "ಜಗತ್‌ಸೃಷ್ಟಿಯ ಸಾಲು ಪೂರಾ ಪ್ರತಿಮೆ ಮತ್ತು ಆಶಯಗಳ ಅತ್ಯಂತ ಮೋಹಕನಾಟ್ಯ. ಕಾಶ್ಮೀರ ಶೈವದಿಂದ ಅಲ್ಲಮ ಪಡೆದಿದ್ದು ಅಥವಾ ಇಡೀ ವೀರಶೈವ ಚಳುವಳಿ ಪಡೆದಿದ್ದು ಬೆಳಗು, ಪ್ರಕಾಶ, ಉರಿ ಇತ್ಯಾದಿ ಜಂಟಿ ಪ್ರತಿಮಾವಳಿಯನ್ನು ಅಲ್ಲಮನ ವಚನಗಳಂತೂ ಬೆಳಕಿನ ತತ್ವ ಪ್ರತಿಮೆಯ ಬಹುಮುಖಿ ವ್ಯಾಖ್ಯಾನ. ಅಲ್ಲಮನನ್ನು ಒಂದೇ ಪ್ರತಿಮೆಗೆ ಸೀಮಿತಗೊಳಿಸುವುದಾದರೆ ಅದು ಬೆಳಕಿನ ಉರಿಗೆ".[5] ಮಂಟೇಸ್ವಾಮಿಯ ಕಾವ್ಯ ಪರಂಜ್ಯೋತಿ ಪ್ರತಿಮೆಯಾಗಿದೆ. ಲಿಂಗವು ಇಷ್ಟಲಿಂಗ ಕಲ್ಪನೆಯಾಗದೆ, ಜ್ಯೋತಿರ್ಲಿಂಗದ ತತ್ವ ಪ್ರತಿಮೆಯಾಗಿದೆ. ಮೂಲತಃ ಜ್ಯೋತಿರ್ಲಿಂಗವಾದಿಯಾದ ಅಲ್ಲಮನನ್ನು ಬೆಳಕಿನ ಉರಿಯ ಪ್ರತಿಮೆಯಾಗಿ ಕಂಡಿದ್ದಾರೆ. ಈ ಕುರಿತ ಒಳನೋಟದ ವಿಶ್ಲೇಷಣೆಯನ್ನು ಅಲ್ಲಮಪ್ರಭು ಮತ್ತು ಶೈವ ಪ್ರತಿಭೆಯಲ್ಲಿ ನೀಡಿದ್ದಾರೆ.

ಮಂಟೇಸ್ವಾಮಿ ಕಾವ್ಯದಲ್ಲಿ ಕಲ್ಯಾಣಪಟ್ಟಣದ ಸಾಲನ್ನು ಶೂನ್ಯ ಸಂಪಾದನೆಯ ಜಾನಪದೀಯ ಪುನರ್‌ರಚನೆಯಾಗಿ ಕಂಡಿರುವ ಡಿ.ಆರ್.ರವರು ಜಾನಪದ ಅನುಭಾವಿ ಕಥನಗಳು ಹೇಗೆ ಸೃಷ್ಟಿಯಾಗುತ್ತವೆ ಎಂಬುವುದನ್ನು ಕುರಿತು ಚರ್ಚಿಸುತ್ತಾರೆ. ಮಂಟೇಸ್ವಾಮಿಯನ್ನು ಭಾರತದ ಶೈವ ದರ್ಶನಗಳೊಂದಿಗೆ ಮತ್ತು ಮಂಟೇಸ್ವಾಮಿಯ ಕಾವ್ಯವನ್ನು ಶೂನ್ಯಸಂಪಾದನೆಯೊಂದಿಗೆ ತೌಲನಿಕ ಅಧ್ಯಯನ ಮಾಡಿರುವ ಡಿ.ಆರ್.ಅವರಿಗೆ ಜಾನಪದ ಕಾವ್ಯ ಸೃಷ್ಟಿ ಕುರಿತ ಕುತೂಹಲ ಸಹಜವಾಗಿದೆ. ಡಿ.ಆರ್.ಅವರ ಅಧ್ಯಯನದಲ್ಲಿ ಮಂಟೇಸ್ವಾಮಿ ಕಾವ್ಯ ಶೂನ್ಯಸಂಪಾದನೆಗಿಂತ ಶ್ರೇಷ್ಠವಾದುದು ಎಂಬ ಮೇಲು ಕೀಳಿನ ಧೋರಣೆ ಇಲ್ಲ. ಬದಲಾಗಿ ಕನ್ನಡ ನಾಡಿನ ಸ್ಥಗಿತಗೊಂಡ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿಯನ್ನು ವಿಸರ್ಜಿತ ಲೋಕದ ಪ್ರತಿಭೆಯೊಂದು ಚಲನಾಶೀಲಗೊಳಿಸಿದ ಕಥನವನ್ನು ಅಖಿಲ ಭಾರತ ಮಟ್ಟದಲ್ಲಿಟ್ಟು ಮಂಡಿಸುತ್ತಾರೆ. ಜನ ಸಾಮಾನ್ಯರು ತಮ್ಮ ಸಾಮಾಜಿಕ ವಿಷಮತೆಯಿಂದ ಹೊರಬರಲು, ಆತ್ಮ ವಿಶ್ವಾಸದಿಂದ ಬದುಕಲು, ತಮ್ಮೊಳಗಿನ ಜೀವಂತಿಕೆಯಿಂದ ತಮಗೆ ಬೇಕಾದಂತ ಜೀವಪರ ಸಂಸ್ಕೃತಿಯನ್ನು ರೂಪಿಸಿಕೊಳ್ಳುತ್ತದೆ ಎಂದು ನೋಡುವ ಹುಡುಕಾಟವಿದೆ.

**ಅಡಿಟಿಪ್ಪಣಿ**

1. ಮೊಗಳ್ಳಿ ಗಣೇಶ, ದೇಸಿ ಕಥನ, ಪುಟ 43
2. ಅದೇ, ಪುಟ 44
3. ಅದೇ, ಪುಟ 46
4. ವೆಂಕಟೇಶ ಇಂದ್ವಾಡಿ, ಮಂಟೆಸ್ವಾಮಿ ಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಪುಟ 17
5. ಅದೇ, ಪುಟ 18